ಇಟಗೊಂಡು ಸಿಡದು ನನ್ನಷ್ಟಕ್ಕ ನಾ ಇರೋ ಧೈರ್ಯಾ ನನಕಡೆ ಇದ್ದಿದ್ದಿಲ್ಲಾ. ಅಲ್ಲದನ ಚಂದ್ರುನ ಹೆಂಡ್ತಿದು ಇಮೇಜ್ ಬ್ಯಾರೇನ ಇತ್ತಲಾ... ಮುಂದ ನನ್ನ, ಸ್ನಿಗ್ಧಾನ್ನ ಛೊಲೊ ನೋಡಕೋತಿದ್ರು" ಎಂದು ಹೇಳಿ ಒಂದು ಕ್ಷಣ ನಿಲ್ಲಿಸಿದರು.

ಮೊದಲಿನ ವಿಷಯ ಗೊತ್ತಿತ್ತು. ಆದರೆ ಸಮಾಜಕ್ಕಾಗಿ ತೋರಿಕೆಯ ನಾಟಕ... ಗೊತ್ತಿರಲಿಲ್ಲ. ಸಪ್ತಸಾಗರದಲ್ಲೇನಿದೆ ಎಂದು ಕಾಣಬಹುದು. ಸಾಗರದ ಸಂಪತ್ತು, ಸಸ್ಯಸಂಕುಲ, ಪ್ರಾಣಿಗಳು, ಮುತ್ತುರತ್ನಗಳು... ಆದರೆ ಮನಸ್ಸೆಂಬ ಸುಪ್ತಸಾಗರದಲ್ಲಿ ಏನು ಅಡಗಿದೆ ಎನ್ನುವುದನ್ನು ತಿಳಿಯುವದು ಮಹಾಕಷ್ಟ. ಪ್ರೇಮ, ವಾತ್ಸಲ್ಯಗಳ ಜೊತೆ ಈರ್ಷೆ, ದ್ವೇಷ, ಅಸೂಯೆ... ಎಂಬ ಮಹಾ ತಿಮಿಂಗಿಲಗಳು ಮುಳುಗೇಳುತ್ತವೆ. ದಿಗ್ಭ್ರಮೆಯಿಂದ ಹೇಗೆ ಪ್ರತಿಕ್ರಿಯಿಸಬೇಕೋ ತಿಳಿಯದೇ, "ಹೋಗ್ಲಿ ಬಿಡ್ರಿ ವೈನಿ. ನಾವೆಲ್ಲಾ ಬರೇ ಮಾತಾಡೋದಾಗ್ತದ. ಆದರ ಬ್ರಹ್ಮ ಯಾರಿಗೆ ಗಂಟು ಹಾಕಿರ್ತಾನೋ ಅಲ್ಲೇ ಮದಿವಿ ಆಗ್ತದ" ಎಂದು ವೇದಾಂತ ಹೇಳಿದೆ. "ಖರೇ ಅದ. ಆದರ ಈಗ ನನಗೇನು ಅವರ ಮ್ಯಾಲೆ ಬ್ಯಾಸರಿಲ್ಲ. ಹೊಂದಿಕೊಂಡುಬಿಟ್ಟೇನಿ. ಈಗ ಸ್ನಿಗ್ಧಾ ಬಿ.ಇ. ಮುಗಿಸಿ ಎಕ್ಸೆಂಚುರಾದಾಗ ನೌಕರಿ ಮಾಡ್ಲಿಕ್ಕತ್ತಾಳ. ನಾ ಅಕಿ ಜೋಡಿ ಮುಂಬೈದಾಗ ಇದ್ದೇನಿ. ಚಂದ್ರು ದುಬೈಕ್ಕಿದ್ದಾರ. ಆರು ತಿಂಗಳಿಗೊಮ್ಮೆ ಬರ್ತಿರ್ತಾರ. ಹಂಗ ಈ ಸಲಾ ಬಂದಾಗ ಕೋವಿಡ್–19 ಇರೋದು ಗೊತ್ತಾಗೇದ. ಏರ್‌ಪೋರ್ಟ್‌ನಿಂದನ ಹಾಸ್ಪಿಟಲ್ಲಿಗೆ ಕರಕೊಂಡು ಹೋಗ್ಯಾರ. ನಮ್ಮ ಪುಣ್ಯಾಕ್ಕ ಡಾಕ್ಟರ್ ಇವರ ಕ್ಲೋಸ್ ಫ್ರೆಂಡ್ ಇದ್ದಾರ. ಎಲ್ಲಾ ಫೋನ್ ಮಾಡಿ ತಿಳಸ್ತಾರ. ಅವರು ಹೇಳಿದ್ರು... 'ಎಲ್ಲಾ ಔಷಧ ನಡದಾವ. ಆದರ ಮನೋಬಲದ ಕೊರತಿ ಅದ. ಮನಶಾ ಧೈರ್ಯಾ ತೊಗೊವಲ್ಲಾ' ಅಂದ್ರು. ನಾನು... ಸ್ನಿಗ್ಧಾ ರಗಡ ಮಾತಾಡಿದ್ವಿ. ಉತ್ಸಾಹ ತುಂಬಿದ್ವಿ. ಅತ್ತು... ಕರದೂ ಆತು. ಆದರ ಚಂದ್ರು ಧೈರ್ಯಾ ಕಳಕೊಂಡ್ಹಂಗ ಮಾತಾಡ್ಕೋತ, "ನಿಮಗೆಲ್ಲಾ ಬೇಕಾದಷ್ಟು ಮಾಡಿಟ್ಟೇನಿ. ನನ್ನ ಕಾಳಜಿ ಬಿಟ್ಟು ಆರಾಮ ಇರ್ರಿ" ಅಂತಾರ. ಬಿ.ಪಿ., ಶುಗರ್, ಕೊಲೆಸ್ಟರಾಲ್, ಹಾರ್ಟ್ ಪ್ರಾಬ್ಲೆಮ್... ಎಲ್ಲಾ ಅವ. ಅದಕ್ಕ ನನಗ ಭಾಳ ಚಿಂತ್ಯಾಗೇದ. ನೀ ಒಂದ್ಸಲಾ ಫೋನ್ ಮಾಡಿ ಅವರ ಜೋಡಿ ಮಾತಾಡ್ತಾ ಪ್ಲೀಸ್" ಎಂದರು.

ಇಷ್ಟು ವರ್ಷಗಳ ನಂತರ ಅವನ ಮನೋಬಲ ನನ್ನಿಂದ ಹೆಚ್ಚಿಸಲಾದೀತೆ? "ವೈನಿ... ನಾನ... ನೀವು ಮಾತಾಡಿದ್ರ ಕೇಳ್ಲಿಲ್ಲಾ ಅವ. ಇನ್ನ ನಾ ಮಾತಾಡಿದ್ರ ಕೇಳ್ತಾನೇನು? ಮತ್ತ ಅದ ಧೊಡ್ಡಿಸ್ತನದ ಉತ್ತರಾ ಕೊಡತಾನ" ಎಂದೆ. ಮೈಥಿಲಿ, "ಇರ್ಲಿ ಪುಷ್ಪಾ. ಪ್ಲೀಸ್... ನನ್ನ ಸಲವಾಗಿ ಕೇಳಿಸಿಗೊ. ಯಾಕಂದ್ರ ಈಗ ನಮಗ ಅವರು ಬೇಕು. ನನಗ... ನನ್ನ ಮಗಳಿಗೆ ಅವರ್ನ ಬಿಟ್ಟರ ಯಾರಿಲ್ಲ. ಅವ್ವ, ಅಪ್ಪ, ಅತ್ತಿ, ಮಾವ... ಎಲ್ಲಾರೂ ತೀರಕೊಂಡಾರ... ಮನಶಾನ ಇಲ್ಲದ ಮ್ಯಾಲೆ ಆಸ್ತಿ ತೊಗೊಂಡು ಏನ ಮಾಡೋದು ಹೇಳು" ಎಂದು ಬಿಕ್ಕಿದರು. ನಾನು ಸಾವರಿಸಿಕೊಂಡು, "ಮಾತಾಡ್ತೇನೇಳ್ರಿ ವೈನಿ. ನೀವು ತ್ರಾಸು ಮಾಡಕೋಬ್ಯಾಡ್ರಿ. ನಂಬರ್ ಕಳಸ್ರಿ" ಎನ್ನುತ್ತ ಫೋನಿಟ್ಟೆ. ತಕ್ಷಣ ಮೆಸೇಜ್ ಬಂದಿತ್ತು. ನಿರ್ದಿಷ್ಟ ಸಮಯವನ್ನೂ ಹೇಳಲಾಗಿತ್ತು. ಹಾಗೇ ಸಂಜೆ ನಾಲ್ಕು ಗಂಟೆಗೆ ಅಳುಕುತ್ತಲೇ ಫೋನು ಮಾಡಿದ್ದೆ. "ನಾ ಪುಷ್ಪಾ ಮಾತಾಡ್ಲಿಕ್ಕತ್ತೇನಿ" ಎಂದಾಕ್ಷಣ ಯಾರೋ ಅವನಿಗೆ ಫೋನ್ ತಲುಪಿಸಿದರು. ಅತ್ತಲಿಂದ, "ಪುಷ್ಪಾನ... ಏನ ಅಪರೂಪ... ಆಶ್ಚರ್ಯ? ಫೋನ್ ಮಾಡೀದಿ?" ಎಂದ. "ಆರಾಮಿಲ್ಲಂತಲಾ... ವೈನಿ ಹೇಳಿದ್ರು. ನೀ ಏನ ಧಾಡ ಧಕಟ ಮನಶಾ. ಧೈರ್ಯಾ ತೊಗೊ. ಲಗೂ ಆರಾಮಾಗ್ತೀ. ಇಷ್ಟೆಲ್ಲಾ ಆಸ್ತಿ ಮಾಡೀಯಂತ... ನೋಡಕೊಳ್ಳಿಕ್ಕೆ ಒಬ್ಬರನ್ನ ಇಟಗೋಬೇಕಾತಲೋ..." ಎಂದು ನಕ್ಕೆ. ಅತ್ತಲಿಂದ ಉತ್ಸಾಹಪೂರಿತ ಧ್ವನಿ, "ಹ್ಞಾಂ... ಖರೇ ನೋಡು. ಹಳೇ ಹುಬ್ಬಳ್ಳ್ಯಾಗಿನ ನಮ್ಮ ಮನಿ ನೋಡಿ ಸಾಕಾಗಿತ್ತು. ಗುಬ್ಬಿ ಗೂಡಿನಗತೆ... ಅದಕ್ಕ ಮುಂಬೈ, ಬೆಂಗಳೂರು, ಪುಣೆ... ಎಲ್ಲಾ ಕಡೆ ಧೊಡ್ಡು ಮನಿ ಮಾಡೇನಿ. ಒಂದಿಷ್ಟು ಸೈಟ್